## 26

# ಪುನಃ ಪರಿಚಯಿಸುವ ಶಿಲುಬೆ

## (12:32)

ಲೇಖಕರ ಟಿಪ್ಪಣಿ: 1995 ಎಪ್ರೀಲ್ 16ರ ವಾರವು ಜಗತ್ತಿಗೆ ಅಂತ್ಯವು ಬಂದಿತೋ ಎಂಬಂತೆ ತೋರುವ ಸಮಯಗಳಲ್ಲಿ ಒಂದಾಗಿತ್ತು. ಸೋಮವಾರ ಪ್ರಾತಃಕಾಲ, ನನ್ನ ಒಬ್ಬ ಅತ್ಯುತ್ತಮ ಸ್ನೇಹಿತನಿಗೆ, ಒಂದು ವಾರ ಮೊದಲು ಕಾಣಿಸಿಕೊಂಡ ಹೃದಯದ ತೊಂದರೆಯ ಕಾರಣದಿಂದ ಕೆಲವು ಪರೀಕ್ಷೆಗಳನ್ನು ಸ್ಥಳೀಯ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳ ಬೇಕಾಗಿತ್ತು. ಪರೀಕ್ಷೆಗಳ ಬಗ್ಗೆ ಅವನಿಗೆ ಭಯವಿರಲಿಲ್ಲ ಮತ್ತು ಅವುಗಳ ಪರಿಣಾಮಗಳ ಬಗ್ಗೆ ಆಶಾವಾದಿ ಯಾಗಿದ್ದನು. ಆದಾಗ್ಯೂ, ಮಧ್ಯಾಹ್ನದ ಸಮಯದಲ್ಲಿ ವೈದ್ಯರು ಅವನಿಗೆ ಅವನ ಪರಿಸ್ಥಿತಿಯು ಗಂಡಾಂತಕಾರಿಯಾಗಿದೆಯೆಂದು ತಿಳಿಸಿದರು. ಮರುದಿನ ಅವನಿಗೆ ಹಾರ್ಟ್ ಬಾಯಪಾಸ ಸರ್ಜರಿ ಆಗುವದಕ್ಕಾಗಿ ಐವತ್ತು ಮೈಲು ದೂರದಲ್ಲಿ ನಮ್ಮ ರಾಜಧಾನಿ ಪಟ್ಟಣದಲ್ಲಿಯ ಪ್ರಮುಖ ಆಸ್ಪತ್ರೆಗೆ ಅಂಬುಲೆನ್ಸಿನಲ್ಲಿ ಒಯ್ಯಲ್ಪಟ್ಟನು. ಸೋಮವಾರ ಸಾಯಂಕಾಲ, ನಮ್ಮ ಸಭೆಗೆ ಒಬ್ಬ ಸಭಾಹಿಲಿಯನು ಸೊಪ್ಟಬಾಲ್ ಗೇಮಿನಲ್ಲಿದ್ದಾಗ ಜೋರಾಗಿ ಹೊಡೆದ ಚಂಡು ಅವನ ಕಣ್ಣಿಗೆ ಬಡಿದಾಗ ಆಸ್ಪತ್ರೆಗೆ ಒಯ್ಯಲ್ಪಟ್ಟನು. ಇದರಿಂದ ಶಾಶ್ವತವಾಗಿ ದೃಷ್ಟಿ ಹಾಳಾಯಿತು. ಅದೇ ರಾತ್ರಿ, ಆ ಸಯದಲ್ಲಿ ನನಗೆ ತಿಳಿಯದೇ ಇದ್ದ ಸ್ಥಳಿಕ ಯುನಿವರ್ಸಿಟಿನಿಂದ ಒಬ್ಬ ಕ್ರೈಸ್ತ ಯುವತಿಯು ಒಂದು ಸ್ಟೋರ ಪಾರ್ಕಿಂಗಿನಿಂದ ಅಪಹರಿಸಲ್ಪಟ್ಟಳು. ಆ ಯುವತಿಯ ಸ್ನೇಹಿ ತರು, ಯುನಿವರ್ಸಿಟಿಯ ಅಧಿಕಾರಿಗಳು ಮತ್ತು ಸ್ಥಳಿಕ ಪೋಲಿಸರು ತೀವ್ರಗತಿಯಿಂದ ಆಕೆಗಾಗಿ ಹುಡುಕಿದರು ಮಂಗಳವಾರ ಮಧ್ಯಾಹ್ನ, ಒಂದು ಗ್ರಾಮದ ರಸ್ತೆಯಲ್ಲಿ ತಳ್ಳಿಬಿಡಲ್ಪಟ್ಟ ಆಕೆಯ ಕಾರಿನಲ್ಲಿ ಆಕೆಯ ಶವವು ದೊರೆಯಿತೆಂಬ ಆಘಾತಕರವಾದ ಸುದ್ದಿಯು ಬಂದಿತು. ಅಂಥ ಅಪರಾಧಗಳು ದೊಡ್ಡ ಪಟ್ಟಣಗಳಲ್ಲಿ ಸಾಮಾನ್ಯವಾಗಿರುವವು. ಆದರೆ ಇಂಥ ಹೀನ ವಾದ ಕಾರ್ಯಗಳು ನಮ್ಮ ಪಟ್ಟದಲ್ಲಿ ನಡೆಯುವಂಥದ್ದು ಕ್ವಚಿತವಾಗಿರುತ್ತದೆ. ಮರುದಿನ ಪ್ರಾತಃಕಾಲ ಯುನಿವರ್ಸಿಟಿ ಚಾಪೆಲಿನ ಆರಾಧನೆಯಲ್ಲಿ ಕೊಲೆಮಾಡಲ್ಪಟ್ಟ ಯುವತಿಗಾಗಿ ಸ್ಮರಣಾರ್ಥ ಪ್ರಾರ್ಥನೆ ಮಾಡಲಾಯಿತು. ಸಾಮಾನ್ಯವಾಗಿ ಮಾತುಗಾರರಾಗಿದ್ದ ವಿದ್ಯಾರ್ಥಿಗಳು ಆಡಿಟೋರಿಯಮ್‌ದಲ್ಲಿ ಮೌನವಾಗಿ ಕೂಡಿ ಬಂದರು ಮತ್ತು ಮುವತ್ತು ನಿಮಿಷಗಳ ನಂತರ ಮುರಿದ ಹೃದಯಗಳಿಂದಲೂ ಕಣ್ಣೀರ ಕಲೆಗಳ ಮುಖಗಳಿಂದಲೂ ಹೊರಟು ಹೋದರು.

ಚಾಪಲಿನಲ್ಲಿಯ ಆರಾಧನೆಯಿಂದ ನನ್ನ ಆಫೀಸಿಗೆ ಹಿಂದಿರುಗಿ ಹೋದೆನು. ನನ್ನ ಡೆಸ್ಕಿನ ಬಳಿ ಕುಳಿತು ಕೊಳ್ಳುವಷ್ಟರಲ್ಲಿಯೇ ಒಬ್ಬರು ನನ್ನ ಬಳಿಗೆ ಓಡಿ ಬಂದರು. ಓಕ್ಲಾಹೋ ಮ್‌ದ ಓಕ್ಲಾಹೋಮ್ ಪಟ್ಟಣದ ಪೆಡರಲ್ ಆಫೀಸ್ ಕಟ್ಟಡಕ್ಕೆ ಬಾಂಬ್ ಹಾಕಲ್ಪಟ್ಟಿದೆ. ಇನ್ನೂರಕ್ಕಿಂತಲೂ ಹೆಚ್ಚು ಜನರು ಸತ್ತು ಹೋಗಿದ್ದಾರೆಂದು ಶಂಕಿಸಲಾಗಿದೆ ಎಂದು ತಿಳಿಸಿದರು. ಮೂರು ದಿನಗಳ ಅವಧಿಯಲ್ಲಿ ಇನ್ನೂ ಏನು ತಪ್ಪಾಗಿ ಹೋಗಿರ ಬಹುದು? ಮುಂದೆ ಏನು ಸಂಭವಿಸಲಿಕ್ಕಿರುವುದು?

ಈ ಎಲ್ಲಾ ಅವಘಡಗಳ ಬಗ್ಗೆ ಅರ್ಥಮಾಡಿಕೊಳ್ಳಲು ನಾವು ಹೋರಾಡುತ್ತಿದ್ದಾಗ, ಬರಲಿಕ್ಕಿದ್ದ ಭಾನುವಾರದ ವಿಚಾರಗಳ ಕಡೆಗೆ ನಿನ್ನ ಮನಸ್ಸು ತಿರುಗಲು ಪ್ರಾರಂಭಿಸಿತು. ಇಂಥ ವಾರದ ನಂತರ ಯಾವುದನ್ನು ಹೇಳಲು ಸಾಧ್ಯವಾಗಬಹುದು? ನಾವು ಕಳೆದ ಸಲ ಸಂದರ್ಶಿಸಿದ ನಂತರದ ಏಳು ದಿನಗಳಲ್ಲಿ ನಾವು ಕೇಳಿದ ದುಃಖಕರವಾದ ವಾರ್ತೆಗಳ ಮೊತ್ತವು

ನಮ್ಮನ್ನು ಗಲಿಬಿಲಿಗೊಳಿಸುವಂಥದ್ದಾಗಿತ್ತು. ಅಂಥ ಸಮಯದಲ್ಲಿ, ಸಭೆಯು ಏನನ್ನು ಕೇಳುವ ಅಗತ್ಯತೆಯಲ್ಲಿದೆ? ಯೋಹಾನನ ಸುವಾರ್ತೆಯ ಮುಖಾಂತರ ಅಧ್ಯಯನ ಸರಣಿಯಲ್ಲಿ ನಾನು ಇಪ್ಪತ್ತಾರು ವಾರಗಳನ್ನು ಕಳೆದಿದ್ದನು. ಯೋಹಾನನಲ್ಲಿ ನಾನು ಮುಂದುವರಿಯ ಬೇಕೋ ಇಲ್ಲವೇ ವಾರದ ಭಾರವಾದ ಘಟನೆಗಳನ್ನು ಸಂಬೋಧಿ ಸಲು ಸಮಯ ತೆಗೆದುಕೊಳ್ಳ ಬೇಕೋ? ಆ ಭಾನುವಾರ ಸಭೆಯನ್ನು ಕ್ರಿಸ್ತನ ಶಿಲುಬೆಗೆ "ಹಿಂದಿರುಗುವಲ್ಲಿ" ನಡಿಸಬೇಕೆಂದು ಪ್ರಾರ್ಥನಾ ಪೂರ್ವಕವಾಗಿ ನಿರ್ಣಯಿಸಿಕೊಂಡೆನು.

---

ವಿವಿಧ ಭಾವನೆಗಳಿಂದ ಮತ್ತು ವಿಚಾರಗಳಿಂದ ನಾವು ಭಾನುವಾರ ಒಂದಾಗಿ ಕೂಡಿ ಬರುತ್ತೇವೆ. ಕೆಲವು ಸಲ ನಾವು ಬರತಕ್ಕದ್ದು ಎಂಬ ಭಾವನೆಯೊಂದಿಗೆ ಬರುತ್ತೇವೆ. ಇತರ ಸಮಯಗಳಲ್ಲಿ ಒಂದಾಗಿರಲು ಬಯಸುವದರಿಂದ ಬರುತ್ತೇವೆ. ಈ ಭಾನುವಾರ ವಿಶೇಷ ವಾಗಿ, ಈ ಕಳೆದ ವಾರದ ಘಟನೆಗಳ ಕಾರಣದಿಂದ ವಿಶೇಷವಾಗಿ ಕೂಡಿ ಬಂದಿರುತ್ತೇವೆ. ನಾವು ಇಲ್ಲಿ ಇರುವ ಅಗತ್ಯತೆಯಿತ್ತು. ನಾವು ಒಬ್ಬರನೊಬ್ಬರು ಆದರಿಸುವ ಮತ್ತು ಪ್ರೋತ್ಸಾಹಿಸುವ ಅಗತ್ಯತೆಯಿತ್ತು. ಮತ್ತು ಈ ಜಗತ್ತಿನಲ್ಲಿ ಕೊನೆಯದಾಗಿ ಉಳಿಯುವುದು ಯಾವುದು ಎಂಬುದನ್ನು ಜ್ಞಾಪಿಸಿಕೊಳ್ಳುವ ಅಗತ್ಯತೆಯಿತ್ತು. ಇಂದು ಹೆಚ್ಚಾದ ಭಾನುವಾರಗಳಿಗಿಂತ ಹೆಚ್ಚಾಗಿ ನಮಗೆ ಕರ್ತನ ಭೋಜನದ ಅಗತ್ಯತೆಯಿದೆ.

ನಮಗೆ ಭೋಜನದ ಅವಶ್ಯಕತೆಯಿದೆ ಯಾಕಂದರೆ ಅಲ್ಲಿ ಭೋಜನವು ನಮ್ಮ ಜ್ಞಾಪಕಕ್ಕೆ ತರುವ ಶಿಲುಬೆಯ ಪುನಃ ಮನನ ಮಾಡುವ ಸಂಗತಿಯಿರುತ್ತದೆ. ಈ ಕಳೆದ ವಾರವು ಮಕ್ಕಳು ರೀಲನ್ನು ಸುತ್ತುತ್ತಿರುವ ರೀತಿಯಲ್ಲಿ ನಮ್ಮನ್ನು ಪುನಃ ಪುನಃ ನೆನಸಿಕೊಳ್ಳುವದರಲ್ಲಿ ನಡಿಸಿತು, ತಲೆತಿರುಗುವ ಮಕ್ಕಳಂತೆ, ನಾವು ಹೊರಗೆ ನೋಡಿ ಇಡೀ ಜಗತ್ತು ನಮ್ಮಿಂದ ಹಾರಾಡುತ್ತಿರುವದನ್ನು ನೋಡುವಾಗ ನಮ್ಮ ಸಮತೋಲನವನ್ನು ಕಳೆದು ಕೊಳ್ಳಲು ಪ್ರಾರಂಭಿಸಿದೆವು. ಅಂಥ ಸಮಯದಲ್ಲಿ ಏನಾದರೊಂದನ್ನು - ಗಟ್ಟಿಯಾದ ಮತ್ತು ಚಲಿಸಲಾರದಂಥದ್ದನ್ನು ಹಿಡಿದುಕೊಳ್ಳಲು ಪ್ರಯತ್ನಿಸುವೆವು. ಅದರ ಸುತ್ತಲೂ ನಮ್ಮ ತೋಳು ಗಳನ್ನು ಸುತ್ತಿಕೊಂಡು ನಮ್ಮ ತಲೆಗಳು ಸುತ್ತುವುದನ್ನು ನಿಲ್ಲಿಸುವವರೆಗೆ ಮತ್ತು ಪುನಃ ನಾವು ನಮ್ಮ ಎರಡು ಕಾಲುಗಳ ಮೇಲೆ ನಿಂತುಕೊಳ್ಳುವವರೆಗೆ ಬಲವಾಗಿ ಹಿಡಿದುಕೊಂಡಿರುವೆವು. ಇಂದು ಕಳೆದ ಏಳು ದಿನಗಳಲ್ಲಿ, ಸಂಭವಿಸಿದ್ದಕ್ಕಿಂತ ಹೆಚ್ಚಾಗಿ ನಾವು ಶಿಲುಬೆಗೆ ಅಂಟಿಕೊಂಡಿರುವುದನ್ನು ಕಂಡು ಕೊಳ್ಳುವೆವು.

ನಾನು ಅಸ್ವಸ್ಥನಾದಾಗ, ನಾನು ಗಲಿಬಿಲಿಗೊಳ್ಳುವೆನು ಮತ್ತು ಸಮಯದ ಹಾದಿಯನ್ನು ಕಳೆದು ಕೊಳ್ಳುವೆನು. ಒಂದು ಅಸ್ವಸ್ಥತೆಯಿಂದ ಗುಣಹೊಂದಲು ಅನೇಕ ದಿನಗಳನ್ನು ಮನೆಯಲ್ಲಿಯೇ ಕಳೆಯ ಬೇಕಾಗಿದ್ದುದನ್ನು ಜ್ಞಾಪಿಸಿಕೊಳ್ಳುತ್ತೇನೆ. ಸಾಮಾನ್ಯವಾಗಿ, ನಾನು ಸ್ವಸ್ಥನಾಗುತ್ತಿರುವೆ ನೆಂದು ಭಾವಿಸುವಾಗ, "ಇದು ಯಾವ ದಿನವೋ ಎಂಬುದು ನನಗೆ ಗೊತ್ತಿರುವದಿಲ್ಲ. ಪುನಃ ಕಾರ್ಯಚರಣೆಯಲ್ಲಿ ತೊಡಗಲು ಒಂದು ಭಾನುವಾರ ತೆಗೆದುಕೊಳ್ಳಲ್ಪಡುತ್ತದೆಂದು ಭಾವಿಸು ತ್ತೇನೆ" ಎಂದು ಹೇಳುತ್ತೇನೆ. ಗಲಿಬಿಲಿಯ ವಾರದ ನಂತರ ನಾವು ಒಂದಾಗಿ ಕೂಡಿ ಬಂದಿರುವಂತೆ ಈ ದಿನವು ಆಗಿರುತ್ತದೆ.

ರಶ್ಯಿಯನ್ ಲೇಖಕ, ಅಲೆಕ್ಸಾಂಡರ ಸೋಲ್ಜೆನಿಲೆಸನ್‌ನು ಸ್ಟಾಲಿನಿಸ್ಟ ವರ್ಕ್ ಕ್ಯಾಂಪಿನಲ್ಲಿ ಎಂಟು ವರ್ಷಗಳನ್ನು ಕಳೆದನು. ಆ ಕಠಿಣವಾದ ವರ್ಷಗಳಲ್ಲಿ ಒಂದು ಸಲ ಅವನ ನಿರೀಕ್ಷೆಯು ಅಳಿದು ಹೋಗಿತ್ತು ಮತ್ತು ಅವನು ಪ್ರಾಣ ಬಿಡಲು ಸಿದ್ಧನಾಗಿದ್ದನು. ಅವನು ಅಸ್ವಸ್ಥನಾಗಿದ್ದನು, ದಣಿದವನಾಗಿದ್ದನು ಮತ್ತು ನಿರಾಶೆಯುಳ್ಳವನಾಗಿದ್ದನು. ಗೋರು ಸಲಿಕೆಯಿಂದ ಕೆಲಸಮಾಡುತ್ತಿದ್ದಾಗ, ಸೋಲ್ಜೆನಿಟ್ಸಿನ್‌ನು ತನ್ನ ಕೆಲಸ ಮಾಡುವುದನ್ನು ಬಿಟ್ಟು ನಡೆದು ಹೋಗಿ ಒಂದು ಮರದ ಬೆಂಚಿನ ಮೇಲೆ ಕುಳಿತು ಕೊಂಡನು. ತಾನು ಮಾಡಿದ್ದನ್ನು ಕಾವಲುಗಾರನು ನೋಡುವದಕ್ಕಾಗಿ ಕಾದು ಕೊಂಡಿದ್ದನು. ಏನು ಸಂಭವಿಸುವುದು ಎಂಬುದನ್ನು ತಿಳಿದಿದ್ದನು

ಹಾಗೂ ಮೊದಲು ಅನೇಕ ಸಲ ಅದನ್ನು ನೋಡಿದ್ದನು. ಕಾವಲುಗಾರನು ಆ ಮನುಷ್ಯನ ಶೂವೆಲ್ಲನ್ನು ಎತ್ತಿಕೊಂಡು ಆ ಮನುಷ್ಯನು ಸಾಯುವವರೆಗೆ ಅದರಿಂದ ಹೊಡೆಯುತ್ತಿದ್ದನು. ಹೀಗಿದ್ದರೂ, ಈ ದಿನ ಕಾವಲುಗಾರನಲ್ಲದ ಬೇರೊಬ್ಬನು ಸೊಲ್ಜೆನಿತ್ಸಿನನ್ನು ಕುಳಿತಿರುವದನ್ನು ನೋಡಿದನು. ತನ್ನ ಕೈಯಲ್ಲಿಯ ಒಂದು ಕೋಲಿನಿಂದ ಅವನು ಸೊಲ್ಜೆನಿತ್ಸಿನ್‌ನ ಪಾದದ ಬಳಿಯಲ್ಲಿ ಉಸುಕಿನಲ್ಲಿ ಒಂದು ಶಿಲುಬೆಯ ಗುರುತು ಮಾಡಿದನು. ಅವನ ನಿರಾಶೆ ತೆಗೆಯಲ್ಪಟ್ಟಿತು. ಆತನ ಪ್ರಾಣದಲ್ಲಿ ಸತ್ಯವು ಧಾವಿಸಿತು, ಧೈರ್ಯವು ಹಿಂದಿರುಗಿತು. ಮತ್ತು ಅವನ ಹೃದಯದಲ್ಲಿ ಜೀವಿಸಲು ಉಜ್ಜೀವನವಾಯಿತು. ಅವನು ಎದ್ದು ನಿಂತುಕೊಂಡನು. ತನ್ನ ಶೂವೆಲ್ಲನ್ನು ಎತ್ತಿಕೊಂಡನು ಮತ್ತು ಕೆಸಲಕ್ಕೆ ಹಿಂದಿರುಗಿದನು. ವರ್ಷಗಳ ನಂತರದಲ್ಲಿ, ಅವನ ಬರಹಗಳು ಮಿಲಿಯಗಟ್ಟಲೆ ಜನರನ್ನು ಪ್ರೇರೆಪಿಸಿದವು. ಉಸುಕಿನಲ್ಲಿ ಎಳೆದ ಸರಳ ಶಿಲುಬೆಯು ಸೊಲ್ಜೆನಿತ್ಸಿನ್ನನ ಆತ್ಮವನ್ನು ಪುನರುಜ್ಜೀವಿತಗೊಳಿಸಿತು ಮತ್ತು ಹೀಗೆ ಅವನ ಜೀವವನ್ನು ರಕ್ಷಿಸಿತು. ಶಿಲುಬೆಯ ಪುನರುಜ್ಜೀವಿಸುವಿಕೆಯ ಬಲಕ್ಕಾಗಿ ಇಂದು ನಾವು ಹುಡುಕುತ್ತೇವೆ.

ಹೊಸ ಒಡಂಬಡಿಕೆಯಲೆಲ್ಲಾ, ಪರಿಶುದ್ಧ ಬರಹಗಳು ಶಿಲುಬೆಗೆ ನಮ್ಮನ್ನು ಹಿಂದಿರುಗಿ ಕರೆಯುತ್ತಿರುತ್ತವೆ. ಸಭೆಯು ನೂತನ ಆಹ್ವಾನವನ್ನು ಗಲಿಬಿಲಿಯ ವಿಷಯವನ್ನು ಇಲ್ಲವೇ ಭಯಂಕರವಾದ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ, ಪ್ರೇರೇಪಿತ ಬರಹಗಾರರು "ಶಿಲುಬೆಯನ್ನು ನೋಡು!" ಎಂದು ಹೇಳುವರು. ಸಾವಿರಾರು ವರ್ಷಗಳ ಹಿಂದೆ ಇಂಥ ಪರಿಸ್ಥಿತಿಗಳಲ್ಲಿ ಅವರು ಹೇಗೆ ಮಾಡಿದರು ಎಂಬುದನ್ನು ನೋಡಿ, ಇಂದು ನಾವು ಏನನ್ನಾದರೂ ಎದುರಿಸುವುದರ ಮುಖಾಂತರ ಅದೇ ಶಿಲುಬೆಯು ನಮಗೆ ಸಹಾಯ ಮಾಡುವುದೆಂದು ನಮಗೆ ಜ್ಞಾಪಿಸಲ್ಪಟ್ಟಿದೆ.

## ವಿಭಜನೆಗೆ ಉತ್ತರ

ಬಿರುಗಾಳಿಯ ಪ್ರವಾಹಗಳ ಮುಖಾಂತರ ಸಭೆಯನ್ನು ಶಿಲುಬೆಯು ಹೇಗೆ ನಡಿಸುತ್ತದೆ ಎಂಬುದರ ಒಂದು ಉದಾಹರಣೆಯು ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ಕಂಡು ಬರುತ್ತದೆ. ಆ ಸಭೆಯೊಂದಿಗೆ ಆರಂಭದಿಂದ ಇದ್ದು ಕೊಂಡು, ಪೌಲನಿಗೆ ಅವರಿಗಾಗಿ ವಿಶೇಷವಾದ ಮೃದುಮನಸ್ಸಿತ್ತು. ಹೀಗಿದ್ದರೂ, ಅದೇ ಸಮಯದಲ್ಲಿ ಸಭೆಯನ್ನು ವಿಭಾಗಿಸುತ್ತಿದ್ದ ಅನೇಕ ಚರ್ಚೆಗಳಿಂದಲೂ ವಿಷಯಗಳಿಂದಲೂ ಬರಹವಾಗಿ ಮನನೊಂದು ಕೊಂಡವನಾಗಿದ್ದನು. ತನ್ನ ಪತ್ರಿಕೆಯ ಪೀಠಿಕೆಯಲ್ಲಿ, ಅವರು ಒಂದಾಗ ಬೇಕೆಂದು ಅವರಿಗೆ ಮನವಿಮಾಡಿಕೊಂಡನು:

> ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದ ಇರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದು ಬಂತು (1 ಕೊರಿಂಥ 1:10, 11).

ಅಂಥ ಸಮಸ್ಯೆಗೆ ಪರಿಹಾರವೇನು? ಅದು ಶಿಲುಬೆ ಆಗಿದೆಯೆಂದು ಪೌಲನು ಹೇಳಿದನು!

> ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ, ... (1 ಕೊರಿಂಥ 1:23).

> ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು (1 ಕೊರಿಂಥ 2:2).

"ಶಿಲುಬೆಯನ್ನು ನೋಡಿರಿ, ಮತ್ತು ನೀವು ವಿಭಜನೆಯನ್ನು ಜಯಿಸುವದಕ್ಕೆ ಮಾರ್ಗವನ್ನು ಕಂಡು ಕೊಳ್ಳುವಿರಿ" ಎಂದು ಪೌಲನು ಅವರಿಗೆ ಹೇಳಿದನು.

## ನೋವಿಗೆ ಉತ್ತರ

ಕಠಿಣವಾದ ಸಮಯಗಳ ಮುಖಾಂತರ ಶಿಲುಬೆಯು ಸಭೆಯನ್ನು ಹೇಗೆ ನಡಿಸುತ್ತದೆ ಎಂಬುದಕ್ಕೆ ಎರಡನೆಯ ಉದಾಹರಣೆಯು 1 ಪೇತ್ರನಲ್ಲಿ ಕಂಡು ಬರತ್ತದೆ. ಕ್ರೈಸ್ತರು ತಮ್ಮ ವಿಶ್ವಾಸಕ್ಕಾಗಿ ಶ್ರಮೆಪಡುತ್ತಿರುವಾಗ, ಹಿಂಸೆಯ ಹಿನ್ನೆಲೆಯಲ್ಲಿ ಇದು ಬರೆಯಲ್ಪಟ್ಟಿತು. ಸಂಕಷ್ಟದ ಸಮಯಗಳಲ್ಲಿ ಆದರಣೆಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ಕ್ರೈಸ್ತರು ಎಲ್ಲಿಗೆ ಹೋಗಬೇಕು? ಶಿಲುಬೆಗೆ ಹೋಗಬೇಕೆಂದು ಪ್ರೇತ್ರನು ಹೇಳಿದನು!

> ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯ ಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ; ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ; ಆತನು ಬಾದೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು. ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (1 ಪೇತ್ರ 2:21-24).

"ಶಿಲುಬೆಯನ್ನು ನೋಡಿರಿ, ಮತ್ತು ನಿಮ್ಮ ಶ್ರಮೆಯೊಂದಿಗೆ ನೀವು ಸಹಿಸಿಕೊಳ್ಳುವ ಮಾರ್ಗವನ್ನು ನೀವು ಕಂಡುಕೊಳ್ಳುವಿರಿ" ಎಂದು ಪೇತ್ರನು ಹೇಳಿದನು.

## ತಪ್ಪು ಅಭಿಪ್ರಾಯಕ್ಕೆ ಉತ್ತರ

ದುರವಸ್ಥೆಯ ಗಲಿಬಿಲಿಯ ಮುಖಾಂತರ ಕ್ರೈಸ್ತರನ್ನು ಶಿಲುಬೆಯು ನಡಿಸುವ ಮಾರ್ಗದ ಮೂರನೆಯ ಉದಾಹರಣೆಯು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಕಂಡು ಬರುತ್ತದೆ. ಬಹುಶಃ ಇಡೀ ಹೊಸ ಒಡಂಬಡಿಕೆಯ ಮೊದಲಿನ ಬರಹಗಳಲ್ಲಿ ಗಲಾತ್ಯದವರಿಗೆ ಬರೆದ ಪತ್ರಿಕೆಯು, ಪೌಲನು ತನ್ನ ಮೊದಲನೆಯ ಪ್ರಸಂಗ ಪ್ರಯಾಣದಲ್ಲಿ ಪ್ರಾರಭಿಸಲು ಸಹಾಯ ಮಾಡಿದ ಹೊಸ ಸಭೆಗಳನ್ನು ಭಯಪಡಿಸುತ್ತಿದ್ದ ಕಾನೂನುಬದ್ಧತೆಯ ವಿರುದ್ಧವಾಗಿ ಬರೆಯಲ್ಪಟ್ಟಿದ್ದಾಗಿದೆ. ಸುಳ್ಳು ಬೋಧಕರು ಪೌಲನನ್ನು ಅವನ ಮಿಶನರಿ ಪ್ರಯಾಣಗಳಲ್ಲಿ ಹಿಂಬಾಲಿಸಿ, ಕ್ರೈಸ್ತರು ರಕ್ಷಿಸಲ್ಪಡಬೇಕಾದರೆ ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯತೆಯು ಅಗತ್ಯವಾಗಿದೆ ಎಂದು ಬೋಧಿಸುತ್ತಿದ್ದರು. ಸಭೆಯ ಅಸ್ತಿತ್ವವನ್ನೇ ಭಯಪಡಿಸುತ್ತಿದ್ದ ಇದನ್ನು ಒಂದು ಸುಳ್ಳೆಂದು ಪೌಲನು ನೋಡಿದನು. ಸುಳ್ಳು ಬೋಧಕರನ್ನು ಮತ್ತು ಅವರ ಸುಳ್ಳು ಬೋಧನೆಗಳನ್ನು ವಿರೊಧಿಸಲು ಸಹಾಯಕ್ಕಾಗಿ ಕ್ರೈಸ್ತರು ಎಲ್ಲಿಗೆ ಹೋಗಬೇಕು? ಅವರು ಶಿಲುಬೆಗೆ ಹೋಗಬೇಕೆಂದು ಪೌಲನು ಹೇಳಿದನು!

> ಇದಲ್ಲದೆ ಕರ್ಮಮಾರ್ಗದಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬುದು ಸ್ಪಷ್ಟವಾಗಿದೆ. ಯಾಕಂದರೆ ನೀತಿವಂತನು ನಂಬಿಕೆಯಿಂದಲೇ ಬದುಕುವನೆಂದು

> ಬರೆದದೆ. ಆದರೆ ಕರ್ಮಮಾರ್ಗಕ್ಕೆ ನಂಬಿಕೆಯು ಆಧಾರವಲ್ಲ. ಆದರ ನೇಮಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು ಎಂದು ಬರೆದದೆ. ಅಬ್ರಹಾಮನಿಗುಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯ ಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗು ಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ (ಗಲಾತ್ಯ 3:11-13).

"ಶಿಲುಬೆಯನ್ನು ನೋಡಿರಿ, ಚರ್ಚಾಸ್ಪದವಾದ ಹಾಗೂ ಗಲಿಬಿಲಿಪಡಿಸುವ ವಿಚಾರಗಳನ್ನು ಹೇಗೆ ಪರೀಕ್ಷಿಸಬೇಕೆಂದು ನೀವು ಕಂಡುಕೊಳ್ಳುವಿರಿ" ಎಂದು ಪೌಲನು ಗಲಾತ್ಯದವರಿಗೆ ಹೇಳಿದನು.

## ಮುಕ್ತಾಯ

ಈ ಹಂತದಲ್ಲಿ, ಯೋಹಾನನ ನಮ್ಮ ಅಧ್ಯಯನದಲ್ಲಿ ಈ ದಿನದ ಮುಖ್ಯ ಪ್ರಸ್ತಾಪವು ಮಧ್ಯದಲ್ಲಿ ಬರುತ್ತದೆ. "ಆದರೆ ನಾನು ಭೂಮಿಯಲ್ಲಿಂದ, ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಎಂದು ಯೇಸು ಹೇಳಿದನು (12:32). ಶಿಲುಬೆಯು ನಮ್ಮ ಹೃದಯಗಳನ್ನು ಎಳೆಯುತ್ತದೆ ಮತ್ತು ಶಿಲುಬೆಯ ಮೇಲೆ ನಮಗಾಗಿ ಮರಣ ಹೊಂದಿದ ನಮ್ಮ ಅದ್ಭುತಕರವಾದ ರಕ್ಷಕನ ಕಡೆಗೆ ನಮ್ಮನ್ನು ಆಕರ್ಷಿಸುತ್ತದೆ.

ಬಿಲ್ ಬ್ರಿಜ್ಜವಾಟರ್ ಎಂಬ ಲೇಖಕನು, ತನ್ನ ಬಾಲ್ಯ ಪ್ರಾಯದಲ್ಲಿ ಒಬ್ಬ ಜಗಳಗಂಟ ಬಾಲಕನು ತನ್ನನ್ನು ಪೀಡಿಸುತ್ತಿದ್ದರ ಬಗ್ಗೆ ಹೇಳಿದನು. ಒಂದು ದಿನ ಬಿಲ್‌ಗೆ ಅವನ ಜನ್ಮದಿನಕ್ಕಾಗಿ ಕೊಡಲ್ಪಟ್ಟ ಉಂಗುರವನ್ನು ಆ ಬಾಲಕನು ತೆಗೆದುಕೊಂಡನು. ಪ್ರತಿದಿನ ಆ ಉಂಗುರವನ್ನು ಹಿಂದಿರುಗಿ ತನಗೆ ಕೊಡಬೇಕೆಂದು ಬಿಲ್ಲ್‌ನು ಅವನನ್ನು ಕೇಳು ತ್ತಿದ್ದನು. ತಾನು ಬಿಲ್ಲನ ಹೆಗಲಿನ ಮೇಲೆ ತನಗೆ ಸಾಧ್ಯವಾದಷ್ಟು ಪೆಟ್ಟನ್ನು ಕೊಡಲು ಬಿಟ್ಟರೆ ಆಗ ಆ ಉಂಗುರವನ್ನು ಹಿಂದಿರುಗಿ ಕೊಡುವೆನೆಂದು ಹೇಳುತ್ತಿದ್ದನು. ನೋವಿಗೆ ಭಯಪಟ್ಟು ಬಿಲ್ಲನು ಉಂಗುರವಿಲ್ಲದೇ, ತಗ್ಗಿಸಲ್ಪಟ್ಟವನಾಗಿ ನಡೆದು ಹೋಗುತ್ತಿದ್ದನು. ಆಗ, ಒಂದು ದಿನ, ಬಿಲ್ಲನ ನಿಕಟ ಸ್ನೇಹಿತ - ಲ್ಯಾರ್ರಿ ಡೇವಿಸ್ ಆ ಬಾಲಕನಿಗೆ ತಾನು ಪೆಟ್ಟನ್ನು ತಿನ್ನುವೆನು ಎಂದು ಹೇಳಿದನು. ಜಗಳಗಂಟ ಬಾಲಕನು ಲ್ಯಾರ್ರಿಗೆ ಪೆಟ್ಟುಕೊಟ್ಟು, ಬಿಲ್ಲನಿಗೆ ಉಂಗುರವನ್ನು ಹಿಂದಿರುಗಿಸಿದನು.

ಆ ಬಾಲ್ಯ ಪ್ರಾಯದ ಸ್ಮರಣೆಯ ಮೇಲೆ ಪ್ರತಿಬಿಂಬಿಸಿ, ಬ್ರಿಜ್‌ವಾಟರ್ ಹೀಗೆ ಬರೆದನು: "ಈ ದಿನದವರೆಗೆ ಆ ಉಂಗುರಕ್ಕೆ ಏನು ಸಂಭವಿಸಿತು ಎಂಬುದರ ಬಗ್ಗೆ ವಿಚಾರವಿರುವದಿಲ್ಲ, ಆದರೆ ಆ ದಿನ ಆ ಪೆಟ್ಟನ್ನು ನನಗಾಗಿ ಲ್ಯಾರ್ರಿ ತೆಗೆದುಕೊಂಡಾಗ, ಲ್ಯಾರ್ರಿ ನನಗಾಗಿ ಮಾಡಿದ್ದನ್ನು ನಾನಿನ್ನೂ ಮರೆತಿರುವದಿಲ್ಲ."

ತಲೆತಿರುಗಿಸುವ ವಾರದ ನಂತರ ಇಂದು ಕ್ರಿಸ್ತನ ಶಿಲುಬೆಯು ಪುನರುಜ್ಜೀವನಗೊಳ್ಳಲು ನಮಗೆ ಸಹಾಯ ಮಾಡುತ್ತದೆ. ಹೊಸದಾದ ಮತ್ತು ವ್ಯಥೆಪಡಿಸುವ ಆಹ್ವಾನಗಳನ್ನು ಹೇಗೆ ಎದುರಿಸ ಬೇಕೆಂಬುದನ್ನು ಅದು ನಮಗೆ ತೋರಿಸುತ್ತದೆ. ಅದು ನಮ್ಮ ಹೃದಯಗಳನ್ನು ಎಳೆಯುತ್ತದೆ. ಮತ್ತು ದೇವರ ಬಳಿಗೆ ಹಿಂದಿರುಗಿತರುತ್ತದೆ.